## ಕರ್ನಾಟಕ ವಿಧಾನ ಪರಿಷತ್

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2160

02. ಮಾನ್ಯ ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ

03. ಉತ್ತರಿಸುವ ದಿನಾಂಕ : 25.03.2021

04. ಉತ್ತರಿಸುವ ಸಚಿವರು. : ಮಾನ್ಯ ಗೃಹ ಸಚಿವರು

| ಕ್ರಸ | ವಿಷಯ | ಉತ್ತರ |
|---|---|---|
| ಅ | ಕೊಪ್ಪಳ ಜಿಲ್ಲೆ ಕುಕನೂರು ತಾಲ್ಲೂಕು ವ್ಯಾಪ್ತಿಯ ಮಸಬಹಂಚನಾಳ ಗ್ರಾಮ ಪಂಚಾಯಿತಿ ಸದಸ್ಯರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ | ಹಾಗಿದ್ದಲ್ಲಿ, ಸದರಿ ಪ್ರಕರಣದ ಸಂಪೂರ್ಣ ವಿವರಗಳನ್ನು ಒದಗಿಸುವುದು; | ಕೂಕನೂರು ಪೊಲೀಸ್ ಠಾಣೆಯಲ್ಲಿನ ಮೊಕದ್ದಮೆ ಸಂಖ್ಯೆ: 48/2016ರಲ್ಲಿನ ಪಿರ್ಯಾದಿದಾರರಾದ ಶ್ರೀ ಹನುಮಪ್ಪ ಬಿನ್ ಯಮುನಪ್ಪ ಹನುಮನಟ್ಟಿ ರವರು ಬೆಂಗಳೂರಿನ ಬಸವನಗುಡಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತನ್ನ ಹೆಂಡತಿಯಾದ ಶಾರದಾ (ಆರೋಪಿ ಎ-6) ರವರೊಂದಿಗೆ 2012ರಲ್ಲಿ ಮದುವೆಯಾಗಿದ್ದು, ಆಕೆಯು ಹಠಮಾರಿ ಸ್ವಭಾವದವಳಾಗಿದ್ದು, ತನಗೆ ವಿನಾಕಾರಣ ಕೊಪ್ಪಳ ಜಿಲ್ಲೆಗೆ ವರ್ಗಾಯಿಸಿಕೊಂಡು ಬಾ ಎಂದು ಹಿಂಸೆ ನೀಡುತ್ತಿದ್ದುದ್ದಲ್ಲದೇ, ತಾನು ಕರ್ತವ್ಯಕ್ಕೆ ಹೋದಾಗ ದಿನಾಂಕ:18.07.2015 ರಂದು ಹೇಳದೇ ಕೇಳದೇ ತಮ್ಮ ತವರೂರಾದ ಕೂಕನೂರಿಗೆ ಹೋಗಿದ್ದು, ಆಕೆಯನ್ನು ಕರೆದುಕೊಂಡು ಬರಲು ಹಿರಿಯರ ಮುಖಾಂತರ ಕೂಕನೂರಿಗೆ ಹೋಗಿ ಎಷ್ಟು ಬುದ್ದಿ ಹೇಳಿದರೂ ಕೇಳದೇ ಅದೇ ರೀತಿ ಹಠ ಮಾಡಿಕೊಂಡು ಕೊಪ್ಪಳಕ್ಕೆ ವರ್ಗ ಮಾಡಿಕೊಂಡು ಬಂದರೆ ಮಾತ್ರ ಸಂಸಾರಿಕ ಜೀವನ ಮಾಡುತ್ತೇನೆ ಎಂದು ತವರು ಮನೆಯಲ್ಲಿ ಉಳಿದುಕೊಂಡಿರುತ್ತಾರೆ. ಮತ್ತೆ ದಿನಾಂಕ: 05.05.2016 ರಂದು ಕೂಕನೂರಿಗೆ ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗಲು ಬಂದಾಗ ಪ್ರಕರಣದಲ್ಲಿ ಆರೋಪಿಸಿರುವ ಆರೋಪಿತರೆಲ್ಲರೂ ಕೂಡಿ ಪಿರ್ಯಾದಿಗೆ ಅವಾಚ್ಯವಾಗಿ ನಿಂದಿಸಿ, ಕೊಲೆ ಮಾಡುವ ಉದ್ದೇಶದಿಂದ ಕಬ್ಬಿಣದ ರಾಡಿನಿಂದ ಹಾಗೂ ಕಲ್ಲಿನಿಂದ ಹೊಡೆದಿರುತ್ತಾರೆ. ಅದಲ್ಲದೇ ಆರೋಪಿಗಳಾದ ಲಕ್ಷ್ಮವ್ವ ಮತ್ತು ಈರಪ್ಪ ಇವರೂ ಸಹ ಪಿರ್ಯಾದಿದಾರರಿಗೆ ಹೊಡೆದು ಗಾಯಗೊಳಿಸಿರುತ್ತಾರೆ ಎಂದು ದಿನಾಂಕ:06.05.2016 ರಂದು ನೀಡಿದ ದೂರಿನ ಮೇರೆಗೆ ಕೂಕನೂರು ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 48/2016 ಕಲಂ 143, 147, 323. 324, 504, 307, ಸಹಿತ 149 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣದಲ್ಲಿನ ಆರೋಪಿತರ ವಿವರ: |
| ಇ | ಈ ಸಂಬಂಧ ಸದರಿಯವರ ಮೇಲೆ ಕಾನೂನಿನ ಪ್ರಕಾರ ತೆಗೆದುಕೊಂಡ ಕ್ರಮಗಳೇನು? (ವಿವರಗಳನ್ನು ಒದಗಿಸುವುದು) | |

| | | |
|---|---|---|
| | | 1) ಈರಪ್ಪ ಗೌರಾಳ, ಯಲಬುರ್ಗಾ<br>2) ಮಾರುತಿ, ಕುಕನೂರು<br>3) ಮಹೇಶ ಬಿನ್ ಈರಪ್ಪ ಗೌರಾಳ, ಕೂಕನೂರು<br>4) ಲಕ್ಷ್ಮವ್ವ ಗಂಡ ಈರಪ್ಪ ಗೌರಾಳ, ಕೂಕನೂರು<br>5) ದ್ಯಾಮಣ್ಣ ಜಮಖಂಡಿ, ಕೂಕನೂರು<br>6) ಶಾರದಾ ಗಂಡ ಹನುಮಪ್ಪ ಹನುಮನಟ್ಟಿ, ಕೂಕನೂರು<br>7) ಮುದಕಪ್ಪ ಗೌರಾಳ, ಕೂಕನೂರು<br>8) ಮಂಜು ಬಿನ್ ಮುದಕಪ್ಪ ಗೌರಾಳ, ಯಲಬುರ್ಗಾ<br>ಸದರಿ ಪ್ರಕರಣದಲ್ಲಿ ಎ-3 ಪ್ರಸ್ತುತ ಮಸಬಹಂಚಿನಾಳ ಗ್ರಾಮ ಪಂಚಾಯಿತಿಯ ಸದಸ್ಯರಾಗಿರುತ್ತಾರೆ. ಆರೋಪಿತರ ಪೈಕಿ ಎ-3, ಎ-7 ಹಾಗೂ ಎ-8 ರವರ ವಿರುದ್ಧ ಆರೋಪ ಸಾಬೀತಾಗಿದ್ದು, ಸದರಿಯವರ ವಿರುದ್ಧ ಕಲಂ 341, 323, 324, 504, 506 ಸಹಿತ ರೆ/ವಿ 34 ಐಪಿಸಿ ಅಡಿಯಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಲಾಗಿದೆ. ಪ್ರಕರಣವು ಮಾನ್ಯ ಜಿಲ್ಲಾ ಸತ್ರ ನ್ಯಾಯಾಲಯ ಕೊಪ್ಪಳ ರವರಲ್ಲಿ ಎಸ್.ಸಿ ನಂ 59/2017ರಲ್ಲಿ ವಿಚಾರಣೆಯಲ್ಲಿರುತ್ತದೆ. |

HD 13 PCQ 2021

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು